# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 15 (51+54) |
| ಸದಸ್ಯರ ಹೆಸರು | ಶ್ರೀ ಕೆ ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 04.12.2023 |
| ಉತ್ತರಿಸಬೇಕಾದ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ / ಅನುದಾನಿತ ಉರ್ದು ಶಾಲೆಗಳೆಷ್ಟು; (ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಸರ್ಕಾರಿ / ಅನುದಾನಿತ ಉರ್ದು ಶಾಲೆಗಳ ವಿವರ ಈ ಕೆಳಕಂಡಂತಿದೆ. |

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಸರ್ಕಾರಿ | ಅನುದಾನಿತ |
|---|---|---|---|
| 1) | ಬಾಗಲಕೋಟೆ | 145 | 5 |
| 2) | ಬಳ್ಳಾರಿ | 70 | 4 |
| 3) | ಬೆಳಗಾಂ | 138 | 15 |
| 4) | ಬೆಂಗಳೂರಲು ದಕ್ಷಿಣ | 105 | 6 |
| 5) | ಬೆಂಗಳೂರು ಗ್ರಾಮಾಂತರ | 59 | 1 |
| 6) | ಬೆಂಗಳೂರು ಉತ್ತರ | 69 | 2 |
| 7) | ಬೀದರ | 260 | 44 |
| 8) | ಚಾಮರಾಜನಗರ | 37 | 0 |
| 9) | ಚಿಕ್ಕಬಳ್ಳಾಪುರ | 82 | 0 |
| 10) | ಚಿಕ್ಕಮಗಳೂರು | 76 | 1 |
| 11) | ಚಿಕ್ಕೋಡಿ | 168 | 7 |
| 12) | ಚಿತ್ರದುರ್ಗ | 88 | 1 |
| 13) | ದಾವಣಗೆರೆ | 137 | 7 |
| 14) | ಧಾರವಾಡ | 141 | 15 |
| 15) | ಗದಗ | 87 | 4 |
| 16) | ಹಾಸನ | 90 | 2 |
| 17) | ಹಾವೇರಿ | 268 | 9 |
| 18) | ಕಲ್ಬುರ್ಗಿ | 253 | 57 |
| 19) | ಕೋಲಾರ | 156 | 6 |
| 20) | ಕೊಪ್ಪಳ | 54 | 1 |
| 21) | ಮಧುಗಿರಿ | 43 | 1 |
| 22) | ಮಂಡ್ಯ | 56 | 0 |
| 23) | ಮೈಸೂರು | 116 | 10 |
| 24) | ರಾಮನಗರ | 82 | 3 |
| 25) | ರಾಯಚೂರು | 101 | 7 |
| 26) | ಶಿವಮೊಗ್ಗ | 173 | 10 |
| 27) | ಶಿರಸಿ | 95 | 4 |

| | | |
|---|---|---|
| | | <table><tr><td>28)</td><td>ತುಮಕೂರು</td><td>142</td><td>4</td></tr><tr><td>29)</td><td>ಉಡುಪಿ</td><td>3</td><td>1</td></tr><tr><td>30)</td><td>ಉತ್ತರ ಕನ್ನಡ (ಕಾರವಾರ)</td><td>65</td><td>7</td></tr><tr><td>31)</td><td>ವಿಜಯನಗರ</td><td>51</td><td>2</td></tr><tr><td>32)</td><td>ವಿಜಯಪುರ</td><td>324</td><td>22</td></tr><tr><td>33)</td><td>ಯಾದಗಿರಿ</td><td>98</td><td>8</td></tr><tr><td></td><td>ಒಟ್ಟು</td><td>3832</td><td>266</td></tr></table> |
| ಆ) | ಅನುದಾನಿತ ಉರ್ದು ಶಾಲೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಕೊರತೆಯಿಂದಾಗಿ ಮಕ್ಕಳ ಶೈಕ್ಷಣಿಕ ಬೆಳವಣಿಗೆ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಬಂದಿದೆ.<br><br>**1.ಭೋಧಕ ಹುದ್ದೆ:**<br>ಅನುದಾನಿತ ಉರ್ದು ಶಾಲೆಗಳನ್ನು ಒಳಗೊಂಡಂತೆ ರಾಜ್ಯದ ಅನುದಾನಿತ ಶಾಲೆಗಳಲ್ಲಿ ದಿನಾಂಕ: 31.12.2015ರ ವರೆಗೆ ಖಾಲಿ ಇರುವ ಭೋಧಕ ಹುದ್ದೆಗಳನ್ನು ಭರ್ತಿಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್ ಇ ಪಿ 2017 ದಿನಾಂಕ:25.09.2018ರಲ್ಲಿ ಅನುಮತಿಸಲಾಗಿದೆ.<br>ಸದರಿ ಅವಧಿಯಲ್ಲಿನ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿಸಲು ಆಡಳಿತ ಮಂಡಳಿಯಿಂದ ನೇಮಕಾತಿ ಪ್ರಕ್ರಿಯೆ ಕೈಗೊಂಡು ನೇಮಕಾತಿ ಅನುಮೋದನೆಗೆ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಅನುಮೋದಿಸಿ ಹುದ್ದೆ ಭರ್ತಿಗೆ ಕ್ರಮವಹಿಸಲಾಗುತ್ತಿದೆ.<br><br>**2.ಬೋಧಕೇತರ ಹುದ್ದೆ:**<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 8 ಎಸ್‌ಇಪಿ 2015 ದಿನಾಂಕ:26.09.2017ರನ್ವಯ ಅನುದಾನಿತ ಉರ್ದು ಶಾಲೆಗಳನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಅನುದಾನಿತ ಪ್ರೌಢ ಶಾಲೆಗಳಲ್ಲಿ ಗ್ರೂಪ್ ಡಿ ಹುದ್ದೆಗಳನ್ನು ನೇರ ನೇಮಕಾತಿ / ಅನುಕಂಪದ ಮೇಲೆ, ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಕೈಗೊಳ್ಳಲು ಆದೇಶಿಸಿರುವುದರಿಂದ ಗ್ರೂಪ್ -ಡಿ ಹುದ್ದೆಗೆ ನೇಮಕಾತಿ ಇರುವುದಿಲ್ಲ.<br><br>ಕರ್ನಾಟಕ ಶಿಕ್ಷಣ ಮಸೂದೆ ಖಾಸಗಿ ಶಾಲೆಗಳ ಸಿಬ್ಬಂದಿ ನೌಕರರ ನೇಮಕಾತಿ/ ಸೇವಾ ಷರತ್ತುಗಳ ನಿಯಮಗಳು 1999 ಅಧ್ಯಾಯ - 4ರಲ್ಲಿ ಅನುದಾನಿತ ಪ್ರೌಢಶಾಲೆಗಳಿಗೆ ಸಿಬ್ಬಂದಿ ಮಾದರಿ ರಚನೆ ಅನ್ವಯ 1 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.<br>ಸದರಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದ್ವಿ.ದ.ಸ ಖಾಲಿ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿಸಲು ಆರ್ಥಿಕ ಮಿತವ್ಯಯ ಆದೇಶ ವಿಧಿಸಿದೆ.<br><br>ಪ್ರಸ್ತುತ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿನ ದ್ವಿ.ದ.ಸ ಖಾಲಿ ಹುದ್ದೆಗಳನ್ನು |

| | | |
|---|---|---|
| | | ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ನೇಮಕಾತಿ ಅನುಮೋದಿಸಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಅನುದಾನಿತ ಉರ್ದು ಶಾಲೆಗಳಲ್ಲಿ ಶಿಕ್ಷಕರ ವಯೋ ನಿವೃತ್ತಿಯಿಂದ ತೆರವಾದ ಖಾಲಿ ಇರುವ ಹುದ್ದೆಗಳೆಷ್ಟು; ತೆರವಾದ ಶಿಕ್ಷಕರ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ನೇಮಕ ಮಾಡಿಕೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ಒದಗಿಸುವುದು) | ಪ್ರಸ್ತುತ ಅನುದಾನಿತ ಉರ್ದು ಶಾಲೆಗಳಲ್ಲಿ ದಿನಾಂಕ:31.12.2015ರವರೆಗೆ ಒಟ್ಟು 18 ಬೋಧಕ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಭರ್ತಿಸಲು ಸರ್ಕಾರದ ಆದೇಶ ಸಂಖ್ಯೆ:8 ಎಸ್ ಇ ಪಿ 2015 ದಿನಾಂಕ : 26.09.2017ರಲ್ಲಿ ಅನುಮತಿಸಿದ್ದು, ಆಡಳಿತ ಮಂಡಳಿಯಿಂದ ಕಾಲಕಾಲಕ್ಕೆ ಹುದ್ದೆ ನೇಮಕಾತಿ ಅನುಮೋದನೆ ಕೋರಿ ಸ್ವೀಕೃತ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ. |
| ಉ) | ರಾಜ್ಯದಲ್ಲಿ ಸದ್ಯ ಇರುವ ಉರ್ದು ಶಾಲಾ ಕೊಠಡಿಗಳು ಶಿಥಿಲಗೊಂಡು ಮೂಲಭೂತ ಸೌಕರ್ಯಗಳಿಲ್ಲದೇ ಅವ್ಯವಸ್ಥೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಹೌದು.<br><br>2021-22ನೇ ಸಾಲಿಗೆ ರೂ.2500.00 ಲಕ್ಷಗಳು, 2022-23ನೇ ಸಾಲಿಗೆ ರೂ.3500.00 ಲಕ್ಷಗಳು ಮತ್ತು 2023-24ನೇ ಸಾಲಿಗೆ ರೂ.1200.00 ಲಕ್ಷಗಳು ಸರ್ಕಾರಿ ಉರ್ದು ಶಾಲೆಗಳನ್ನು ಒಳಗೊಂಡಂತೆ, ರಾಜ್ಯದ ಎಲ್ಲಾ, ಸರ್ಕಾರಿ ಶಾಲೆಗಳ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗೆ ಅನುದಾನ ಬಿಡುಗಡೆಯಾಗಿರುತ್ತದೆ. |

ಸಂಖ್ಯೆ: ಇಪಿ 357 ಪಿಎಂಸಿ 2023

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.